INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -4, July--August, 2025
PageNo,33-45
Peer -Reviewed, Refereed Journal

# ವಚನಗಳಲ್ಲಿ ಮಾಯೆ

ರವಿಕುಮಾರ.ಡಿ. [1]

ಕನ್ನಡ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚು ಮೌಲ್ಯಯುತ ಭಿನ್ನ ಮತ್ತು ಸರಳ ಅಭಿವ್ಯಕ್ತಿ ಪ್ರಕಾರ ವಚನ ಸಾಹಿತ್ಯ. ಸದಾ ಜೀವನ ಮೌಲ್ಯಪರತೆಯಿಂದ ಕೂಡಿದ ಗಟ್ಟಿ ತಾತ್ವಿಕ ನೆಲೆಯನ್ನು ಹೊಂದಿರುವಂಥದ್ದು. ಮನುಷ್ಯ ಇತರ ಜೀವಿಗಿಂತ ಶ್ರೇಷ್ಠನೆಂದು ಗುರುತಿಸಿಕೊಂಡದ್ದೆ ತಾನಾಡುವ ಮಾತಿನಿಂದ. 'ಮಾತು ಮಾತು ಮಥಿಸಿ ಬಂತು ನಾದದ ನವನೀತ' ಎಂಬ ಬೇಂದ್ರೆಯವರ ಮಾತುಗಳು ವಚನಕಾರರಲ್ಲೇ ಸಾಬೀತಗೊಂಡಿದ್ದವು. ಆದ್ದರಿಂದ ಜನಸಾಮಾನ್ಯರನ್ನು ಕೇಂದ್ರೀಕರಿಸಿ ಆಡು ಮಾತಿನಲ್ಲಿ ವಚನ ರಚನೆ ಮಾಡಿದರು. ಅವರ ನಂಬಿಕೆಯೇ ಮಾತುಗಳಾಗಿ, ಆ ಮಾತೇ ಆದರ್ಶಮಯ ಜೀವನಾನುಭವದ ಸಂಕೇತವಾಗಿ ಉಳಿದು 'ವಚನ' ಎಂದರ್ಥ ಪಡೆಯಿತು. ಪ್ರತಿಯೊಬ್ಬ ವಚನಕಾರರಲ್ಲೂ ಜೀವನಾನುಭವದ ಅಗಾಧತೆ ಗಟ್ಟಿ ನೆಲೆಯಲ್ಲಿ ಧ್ವನಿಸಿತ್ತು ಎಂಬುದು ಅವರ ವಚನಗಳ ಮೂಲಕ ತಿಳಿಯುತ್ತದೆ.

ವಚನಕಾರರ ಪ್ರಕಾರ ಮೊದಲು ಲಿಂಗ ಒಂದೇ ಇತ್ತು; ಅದು ನಿರ್ಗುಣ, ನಿರಾಕಾರವಾಗಿತ್ತು; ಅದು ಏನನ್ನೂ ಕುರಿತು ಚಿಂತಿಸುವಂತಿರಲಿಲ್ಲ, ಏಕೆಂದರೆ ಚಿಂತಿಸಲ್ಪಡಲು ಏನೂ ಇರಲಿಲ್ಲ. ಅದಕ್ಕೆ ಸ್ವಪ್ರಜ್ಞೆ ಸಹಾ ಇರಲಿಲ್ಲ. ಅಂಥ ಸ್ಥಿತಿಯ ಲಿಂಗಕ್ಕೆ ವಚನಕಾರರು ಶೂನ್ಯ, ಬಯಲು, ಮುಂತಾದ ಹೆಸರುಗಳನ್ನು ಕೊಟ್ಟಿದ್ದಾರೆ. ಇಷ್ಟರವರೆಗೆ ಈ ಪರಿಕಲ್ಪನೆ ಶಂಕರರ ನಿರ್ಗುಣ, ನಿರಾಕಾರ ಬ್ರಹ್ಮನ ಪರಿಕಲ್ಪನೆಯನ್ನೇ ಹೋಲುತ್ತದೆ. ಶಂಕರರ ನಿರ್ಗುಣ ಬ್ರಹ್ಮನಲ್ಲಿ ಸೃಷ್ಟಿಸಬೇಕೆಂಬ ಇಚ್ಛೆ ಹುಟ್ಟುವುದೆ ಇಲ್ಲ. ಆದರೆ ಅಲ್ಲಮರ ಶೂನ್ಯಲಿಂಗದಲ್ಲಿ ಸೃಷ್ಟಿಸಬೇಕೆಂಬ ಇಚ್ಛೆಯುಂಟಾಗುತ್ತದೆ. ಆಗ ಅದರಲ್ಲಿಯೇ ಇದ್ದ ಶಕ್ತಿಯಲ್ಲಿ ಚಲನೆ ಉಂಟಾಗಿ ಅದು ಜಗತ್ತಿನ ನಾನಾ ವಸ್ತುಗಳಾಗಿ ರೂಪಾಂತರಗೊಳ್ಳುತ್ತದೆ. ಅಲ್ಲಮ ಒಂದು ಉಪಮೆಯ ಮೂಲಕ ಇದನ್ನು ಸ್ಪಷ್ಟಪಡಿಸುತ್ತಾರೆ: ಮರಗಳು ಹೇಗೆ ನಿರ್ದಿಷ್ಟ ಋತುವಿನಲ್ಲಿ ಪಲ್ಲವಿಸಿ, ಹೂ ಹಣ್ಣು ಇತ್ಯಾದಿಗಳಾಗುತ್ತವೆಯೋ ಹಾಗೆ, ಹರನ ಇಚ್ಛೆಯ ಪ್ರಕಾರ ಶಕ್ತಿಯು ಜಗತ್ತಿನ ನಾನಾ ವಸ್ತುಗಳಾಗಿ ರೂಪಾಂತರಗೊಳ್ಳುತ್ತದೆ. ಹೀಗೆ ಹರನೇ (ಲಿಂಗನೇ) ತನ್ನ ಇಚ್ಛೆಯಿಂದ ಸೃಷ್ಟಿಸಿರುವ ಜಗತ್ತು ಮಾಯೆ ಅಥವಾ ಮಿಥ್ಯೆ ಆಗಿರದೆ ಸತ್ಯವೇ ಆಗಿದೆ. ಅದು ಪ್ರಳಯಕ್ಕೆ ಒಳಗಾಗುವ ತನಕವಾದರೂ ಇರುತ್ತದೆ;

[1]. ಸಂಶೋಧನಾ ವಿದ್ಯಾರ್ಥಿ,ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎಂದಿಗೂ ಕೇವಲ ತೋರಿಕೆಯಲ್ಲ. ಹೀಗೆಂದು ಇತರ ವಚನಕಾರರೂ ನಂಬುತ್ತಾರೆ. ಸಾಮಾನ್ಯರ ಕಲ್ಪನೆಯ ಪ್ರಕಾರ ಮಾಯೆ ಎಂದರೆ ಹೆಣ್ಣು, ಸಂಸಾರವೆಂದರೆ ಹೆಣ್ಣಿನ ಮೂಲಕ ಸುತ್ತಿಬೆಳೆವ ಕುಟುಂಬ ಜೀವನ, ವಂಶ, ಮನೆತನ ಇತ್ಯಾದಿ.

ಮಾಯೆ ಸಂಸಾರವನ್ನು ಕುರಿತ ಚರಿತ್ರೆ ಇತಿಹಾಸ ಅತಿಪುರಾತನ. ವೇದಪೂರ್ವ ಜಾನಪದ ಶ್ರದ್ದೆ ಆಚಾರ ನಂಬಿಕೆಗಳಿಂದಲೇ ಎಂದೋ ಇದು ಆರಂಭವಾದುದು. ಇದಕ್ಕೆ ಆಧಾರವಾಗಿ ಹರಪ್ಪ, ಮಹಂಜೋ ದಾರೋಗಳಲ್ಲಿ ದೊರೆತ ಕಿರೀಟಧಾರಿ ಹೆಣ್ಣು ಗರ್ಭಿಣಿ ಮಣ್ಣಗೊಂಬೆಗಳು ಇದಕ್ಕೆ ಸಾಕ್ಷಿಯಾಗಿವೆ. ವೇದಪೂರ್ವ ಮಾತೃದೇವತಾರಾಧನೆ ರೂಢಿಯಲ್ಲಿದ್ದುದು ಅದು ಶತಮಾನಗಳ ಮಧ್ಯೆ ಅನೇಕ ವೈವಿಧ್ಯತೆಗಳ ನಡುವೆಯೂ ಸಾಗಿಬಂದು ಈಗಲೂ ಇಂದಿಗೂ ಗ್ರಾಮೀಣ ಜೀವನದಲ್ಲೂ ರೂಢಿಗತ ಜೀವಂತವಾಗಿರುವುದು ದಕ್ಷಿಣ ಭಾರತದ ಹಳ್ಳಿ ಹಳ್ಳಿಗಳಲ್ಲಿ ಕಾಣುವ ಊರಮ್ಮಗಳ ಪೂಜೆ ಉತ್ಸವಗಳು ಸಾಕ್ಷಿಯಾಗಿವೆ.

ಮಾತೃ ಉಪಾಸನೆಯ ಬಗ್ಗೆ ಸಂಶೋಧನೆ ನಡೆಸಿದ ತಜ್ಞರ ಅಭಿಪ್ರಾಯದಂತೆ ಇದು ಆರ್ಯ ದ್ರಾವಿಡ ಸಂಸ್ಕೃತಿಗಳ ಸಂಗಮ ಸಾಮರಸ್ಯದ ಗುರುತು. ಪರಸ್ಪರ ಸಾಂಸ್ಕೃತಿಕವಾಗಿ ಸಮಾವೇಶಗೊಳ್ಳುವುದಕ್ಕೆ ಶಕ್ತಿ ಉಪಾಸನೆಯೇ ಸೇತುವೆಯಾಗಿದೆ ಎನ್ನುತ್ತಾರೆ. ಭಾರತವು ಪ್ರಮುಖವಾಗಿ ಶಕ್ತಿವಾದದ ನೆಲೆಯಾದ ದೇಶ, ಸೃಷ್ಟಿ, ತತ್ವದ ಸಂಕೇತವಾಗಿ ಆದಿಮಾತೆಯ ಕಲ್ಪನೆ ಉಪಾಸನೆ ರೂಪುಗೊಂಡದ್ದು ಇತರ ದೇಶಗಳಲ್ಲಿ ಕಂಡುಬಂದರೂ ಭಾರತ ಮಾತ್ರ ತನ್ನ ಧಾರ್ಮಿಕ ಜೀವನದಲ್ಲಿ ಶಕ್ತಿ ಉಪಾಸನೆಯನ್ನು ಇಷ್ಟು ವ್ಯಾಪಕವಾಗಿ ಅಳವಡಿಸಿಕೊಂಡಿದ್ದು ಬೇರೆ ಎಲ್ಲಿಯೂ ಕಾಣಲು ಸಾಧ್ಯವಿಲ್ಲ ಎಂದಿದ್ದಾರೆ ಪ್ರಸಿದ್ಧ ಸಂಶೋಧಕರಾದ ಶಶಿಭೂಷಣ ದಾಸಗುಪ್ತಾ ಅವರು.

ಇಲ್ಲಿಯವರೆಗಿನ ಸ್ಥೂಲ ಸಮೀಕ್ಷೆಯಿಂದ ಶಕ್ತಿ ಉಪಾಸನೆ ಹೆಣ್ಣಿನ ರೂಪದಲ್ಲಿ ದೇವತಾ ಸತ್ವವನ್ನು ಕಂಡುಕೊಳ್ಳುತ್ತಾ ಬಂದ ಪರಂಪರೆ ಎಷ್ಟೇ ಅನಾದಿಯಾಗಿದ್ದರೂ ಅದು ಅವ್ಯಾಹತವಾಗಿ ಹೇಗೆ ಮುಂದುವರೆಯಿತು, ಭಾರತೀಯ ಧಾರ್ಮಿಕ ಜಗತ್ತಿನಲ್ಲಿ ಯಾವ ರೀತಿ ಉನ್ನತ ಸ್ಥಾನ ಪಡೆದು ಭಾರತೀಯ ಮನೋಧರ್ಮದ ಭಾವನಾತ್ಮಕ ಅಂಶದ ಭಾಗವಾಗಿ ಮುಂದುವರೆಯಿತು.

ವಚನಕಾರರು ಮಾಯೆಯನ್ನು ಹಲವು ವಿಧಗಳಲ್ಲಿ ವಿವರಿಸಿದ್ದಾರೆ. ಕೆಲವರು ಮಾಯೆಯನ್ನು ಸ್ತ್ರೀ ರೂಪದಲ್ಲಿ ನೋಡಿದರೆ, ಇನ್ನು ಕೆಲವರು ಭೌತಿಕ ವಸ್ತುಗಳ ರೂಪದಲ್ಲಿ ನೋಡುತ್ತಾರೆ. ಆದರೆ ಎಲ್ಲರ ಅಭಿಪ್ರಾಯ ಒಂದೇ: ಮಾಯೆಯ ಮೋಹಕ್ಕೆ ಒಳಗಾಗದೆ, ಆಧ್ಯಾತ್ಮಿಕ ಜ್ಞಾನವನ್ನು ಪಡೆಯುವುದು ಮುಖ್ಯ.

8ನೆಯ ಶತಮಾನದಲ್ಲಿ ಶಂಕರರ ಮಾಯಾವಾದವೆಂಬುದು ಬೆಳೆದು ಅಲ್ಲಿ ಬ್ರಹ್ಮ ಸತ್ಯ ಜಗನ್ಮಿಥ್ಯ ಎಂಬ ತತ್ವವೇ ಅವರ ವಾದದ ಪ್ರಮುಖ ಅಂಶವಾಯಿತು. ಶಂಕರರ ದೃಷ್ಟಿಯಲ್ಲಿ ಈ ವಿಶ್ವ ಜಗತ್ತು ಎಲ್ಲವೂ ಮಿಥ್ಯ ನಶ್ವರ. ಶಾಶ್ವತ ಸತ್ಯ ಕೇವಲ ಬ್ರಹ್ಮ ಒಂದೇ. ಅವರ ಈ ನಿಷ್ಪ್ರಪಂಚವಾದವನ್ನು ಸಮರ್ಥಿಸಲು ಪೂರಕವಾಗಿ ವೈರಾಗ್ಯವನ್ನೇ ಪ್ರಧಾನ ಸಾಧನೆಯಾಗಿ ಸ್ವೀಕರಿಸಿದ ಜೈನ ಬೌದ್ಧ ಧರ್ಮಗಳು ಅದಕ್ಕೆ ಹಿನ್ನೆಲೆಯಾದವು.

ವೈದಿಕ ದೃಷ್ಟಿಯಲ್ಲಿ ಋಗ್ವೇದ ಕಾಲದಿಂದ ಸಾಗಿಬಂದ ಕರ್ಮಕಾಂಡಗಳಲ್ಲಿ ಯಜ್ಞಗಳಿಗೆ ಮಹತ್ವ ಬೆಳೆದು ಅಲ್ಲಿಯ ಉಪಾಸನೆ ಎಲ್ಲವೂ ಕರ್ಮಪ್ರಧಾನವಾಗಿ ಕೊಡುವ ಪಡೆವ ಅಂಶವಾಗಿ ಒಂದು ರೀತಿ ಪ್ರಾಪಂಚಿಕೆಯನ್ನು ಸುತ್ತಿಕೊಳ್ಳುವ, ಜನಾಂಗ ಶಕ್ತಿ ಸಬಲತೆಯನ್ನು ಹೆಚ್ಚಿಸುವ ಉದ್ದೇಶವಾಗಿತ್ತು. ವೇದಗಳ ಪ್ರಕಾರ ಅಪತ್ನಿಕನಿಗೆ ಯಜ್ಞಾಧಿಕಾರವಿಲ್ಲ, ಪುತ್ರನಿಲ್ಲದವನಿಗೆ ಸದ್ಗತಿಯಿಲ್ಲ. ಹೀಗೆ ದಾಂಪತ್ಯ ಜೀವನ ವಂಶಪರಂಪರೆ ಸಂತಾನಾಭಿವೃದ್ಧಿ ಜನಾಂಗ ಪ್ರಾಬಲ್ಯದ ಅಂತರ್ಗತ ಉದ್ದೇಶ ಸ್ಥೂಲವಾಗಿ ಬೆಳೆದದ್ದು ವೈದಿಕ ಧರ್ಮದ ಪ್ರಮುಖ ಅಂಶ ಕರ್ಮವೇ ಎಂಬಂತಾಯಿತು.

ಕರ್ಮ ಶುಷ್ಕ ಕ್ರಿಯೆಯಾದಾಗ ಕೇವಲ ಅರ್ಥಹೀನ ಆಚಾರಗಳು ಪದ್ಧತಿಗಳು ಎನಿಸಿದಾಗ ಅವುಗಳ ಉದ್ದೇಶವನ್ನು ತಿಳಿಯುವ ಜ್ಞಾನವನ್ನು ಪಡೆಯುವುದು ಮಹತ್ವದ್ದು. ವೇದಗಳ ಕರ್ಮಕಾಂಡಗಳಿಗೆ ಜ್ಞಾನ ಚಿಂತನೆಗಳು ಪೂರಕವಾಗಿ ಬಂದದ್ದು ಉಪನಿಷತ್ತುಗಳಿಂದ. ಉಪನಿಷತ್ತುಗಳಲ್ಲಿ ಆತ್ಮ ಮುಕ್ತಿ ಯಜ್ಞ ಆಚರಣೆ ಇತ್ಯಾದಿಗಳ ಸ್ವರೂಪ ಚರ್ಚೆ ಹಲವು ದಿಕ್ಕಿನಲ್ಲಿ ಬಂದಿರುವುದನ್ನು ತಜ್ಞರು ಕಂಡುಕೊಂಡಿದ್ದಾರೆ. ಕರ್ಮ ಜ್ಞಾನ ಇವುಗಳ ಜೊತೆಗೆ ಇವುಗಳ ಅತಿರೇಕದಿಂದ ಉಂಟಾದ ದುಷ್ಪರಿಣಾಮಗಳನ್ನು ಸಾಮಾಜಿಕ ಪ್ರಭಾವವನ್ನು ಗಮನಿಸಿದಾಗ ನಿರೀಶ್ವರವಾದವನ್ನೇ ಬೆಂಬಲಿಸಿದ ಜೈನ ಬೌದ್ಧರು ವೈರಾಗ್ಯಕ್ಕೆ ಮಹತ್ವಕೊಟ್ಟರು. ಕರ್ಮ ಜ್ಞಾನ ವೈರಾಗ್ಯ ಈ ಮೂರರ ಸಮನ್ವಯಕ್ಕಾಗಿ ಸಮಾಜ ಭಕ್ತಿಸಂಪ್ರದಾಯದೆಡೆಗೆ ತಿರುಗಿದುದು ಹತ್ತನೆಯ ಶತಮಾನದ ಪೂರ್ವದಲ್ಲಿಯೇ ಇತಿಹಾಸದಲ್ಲಿ ಕಂಡುಕೊಳ್ಳುತ್ತೇವೆ.

ಶಕ್ತಿವಾದಕ್ಕೆ ಪೂರಕವಾಗಿ ಸಪ್ರಪಂಚವಾದ ಪ್ರಾಪಂಚಿಕ ಅನುಭೋಗ ಬೆಳೆಯುತ್ತಾ ಬಂದರೆ ಮತ್ತೊಂದೆಡೆ ಮಾಯಾ ಕಲ್ಪನೆಯ ಆಭಾಸದ ಮೂಲಕ ನಿಷ್ಪ್ರಪಂಚವಾದಕ್ಕೂ ಸಮಾಜದಲ್ಲಿ ತಮ್ಮ ತಮ್ಮ ರೀತಿಯಲ್ಲಿ ನಿಂದೆ ತ್ಯಾಜ್ಯ ಅತಿರೇಕಗಳ ಹಂತ ಕಂಡುಕೊಳ್ಳಲು ಸಾಧ್ಯವಾಯಿತು. ಇದನ್ನು ಗಮನಿಸಿದ ವಚನಕಾರರು ಎರಡರ ಅತಿರೇಕವನ್ನು ಅರ್ಥಹೀನ ಎಂದುಕೊಂಡು ಸಮನ್ವಯದ ಸಹಜ ಜೀವನ ಭಕ್ತಿ ಪ್ರಧಾನ ಅಗತ್ಯ ಎಂದುಕೊಂಡರು. ನಿಷ್ಪ್ರಪಂಚವಾದ ಸಪ್ರಪಂಚವಾದ ಮಾಯೆ ಶಕ್ತಿಗಳ ಪ್ರಧಾನ ಚಿಂತನೆಯ ತಾರ್ಕಿಕ ವಾದವಿವಾದಗಳಾಗಿ ಬೆಳೆದರೂ ಅವುಗಳ ಅನುಭಾವಿಕ ದಾರ್ಶನಿಕ ಮನನ ಚಿಂತನೆಯಲ್ಲಿ ಮಹಾಪುರುಷರು ಕಂಡುಕೊಂಡದ್ದು ಭೇದ ಇರುವುದು ಕೇವಲ ಮಾನವನ ದೃಷ್ಟಿಯಲ್ಲಿ.

ಈ ದೃಷ್ಟಿದೋಷದಿಂದ ಅವನು ತನ್ನದೇ ಲೋಕ ಲೌಕಿಕ ರೀತಿಯಲ್ಲಿ ಜೀವನವನ್ನು, ಸಂಗಾತಿಯನ್ನು, ಜಗತ್ತನ್ನು, ಪರಿಭಾವಿಸುವನು ಸ್ವೀಕರಿಸುವನು. ಆದರೆ ಶರಣರ ವಾದದಲ್ಲಿ ವಿಚಾರ ಚಿಂತನೆ ಆನುಭಾವಿಕ ನೆಲೆಯಲ್ಲಿ ಲೋಕ ಲೌಕಿಕ ಜೀವನ ಬೇರೆ ಮುಕ್ತಿ ಸಾಧನೆ ಬೇರೆ ಎಂಬ ವಾದಕ್ಕೆ ಸ್ಥಾನವಿಲ್ಲ.

ವಚನಕಾರರ ಒಟ್ಟಿನ ಅಭಿಪ್ರಾಯ ಸ್ಥೂಲ ದೃಷ್ಟಿಕೋನವೆಂದರೆ ಅವರು ಒಂದು ಹಂತಕ್ಕೆ ಸಪ್ರಪಂಚವಾದಿಗಳೇ ಎನಿಸಿದರೂ ಈ ಪ್ರಪಂಚವೇ ಸರ್ವಸ್ವ ಎನ್ನುವವರಲ್ಲ. ಅದು ನಿಷ್ಪ್ರಪಂಚವಾದಿಗಳ ಹಾಗೆ ನಶ್ವರವು ಅಭಾಸವು ಅಲ್ಲ. ಈ ಪ್ರಪಂಚ ಈ ಸೃಷ್ಟಿ ಸಂಸಾರ ಇದು ಜೀವನನ್ನು ಭಕ್ತಿಮಾರ್ಗಕ್ಕೆ ಅಣಿಗೊಳಿಸುವ ಪ್ರಯೋಗರಂಗವಾಗಿ ಬೆಳೆದ ಸಾಧನಾಕ್ಷೇತ್ರ. ಮರ್ತ್ಯಲೋಕವೇ ಕರ್ತಾರನ ಕಮ್ಮಟ ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುತ್ತಾರೆ. ಹೀಗೆಂದ ಅವರ ಸ್ಥೂಲ ಚಿಂತನೆಯಲ್ಲಿ ಕಾಣುವುದು ಮಾನವ ಇಹಪರಗಳನ್ನು ಬೇರ್ಪಡಿಸದೆ ತನ್ನ ಕರ್ತವ್ಯ ಕರ್ಮಬದ್ಧತೆಯಲ್ಲಿಯೇ ಭಕ್ತಿ ಜೀವನ ಸಾಗಿಸಬೇಕು. ವಿಮುಖನಾಗದೆ ಸಹಜ ಲೋಕ ಲೌಕಿಕ ನೀತಿ ಮಾನವ ಪ್ರೀತಿಯನ್ನು ಸಾಧಿಸುತ್ತಲೇ ಲಿಂಗಾಂಗ ಸಾಮರಸ್ಯ ಪಡೆಯಬೇಕು ಎಂದಿರುವರು.

ಶಕ್ತಿ ಎಂಬುದು ಪರಮಾತ್ಮನ ಸಾಕಾರ ಸತ್ವ ಎಂದು ಗ್ರಹಿಸಿ ಒಪ್ಪಿಕೊಂಡರೂ ಆರಾಧನಾ ಮನೋಭಾವ ಬೇರೆ, ಲೌಕಿಕ ಜೀವನ ಬೇರೆ ಎನ್ನುವಂತಹ ವಿಭೇದ ನೀತಿಗೆ ಕಾರಣವಾದ ಸ್ತ್ರೀ ಪುರುಷರ ಪರಸ್ಪರ ಚಿಂತನೆ ಅಭಿಪ್ರಾಯಗಳು ಬೆಳೆದು ಹೆಣ್ಣಿನ ಬಗ್ಗೆ ಪುರುಷ ಸಮಾಜ ಯಾವ ರೀತಿ ವಿಚಾರ ಚಿಂತನೆಗಳನ್ನು ಅನುಭವ ಮನನಗಳನ್ನು ಬೆಳೆಸಿಕೊಂಡಿತು. ಹಾಗೆಯೇ ಸ್ತ್ರೀ ಸಮುದಾಯದಲ್ಲೂ ಹಲವು ರೀತಿಯ ಪುರುಷನನ್ನು ಕುರಿತ ಅಭಿಪ್ರಾಯಗಳು ಮಾನಸಿಕವಾಗಿ ಆತ್ಮೀಕವಾಗಿ ಉಂಟಾಗಿದ್ದರೂ ಸ್ತ್ರೀ ಅಭಿವ್ಯಕ್ತಿಯ ಚರಿತ್ರೆ ಭಾರತೀಯ ಇತಿಹಾಸದಲ್ಲಿ ತೀರಾ ದುರ್ಬಲ ಇಲ್ಲವೆಂದರೂ ಸರಿಯೆ. ಕಾರಣ ಪ್ರಧಾನವಾಗಿ ಸ್ತ್ರೀಯನ್ನು ಕುರಿತ ಹೆಣ್ಣನ್ನು ಕುರಿತ ಪುರುಷನ ಕೌಟುಂಬಿಕ ಜೀವನದ ಅನುಭವ ಅಭಿಪ್ರಾಯಗಳು ಸಾರ್ವಜನಿಕವಾಗಿ ಅವನು ಗ್ರಹಿಸಿದ ಸ್ತ್ರೀ ಸಂಬಂಧ ಧೋರಣೆ ಚಿಂತನೆಗಳು ಹಾಗೆಯೇ ಸ್ತ್ರೀ ಸತ್ವದ ಬಗ್ಗೆ ಅವನು ಬೆಳೆಸಿಕೊಂಡು ಬಂದ ಗೌರವಶ್ರದ್ಧೆಗಳು ಹಲವು ದಿಕ್ಕಿನಲ್ಲಿ ಸಾಗಿದವು ಚರಿತ್ರೆಯಲ್ಲಿ ಲಭ್ಯವಾಗಿವೆ.

ಮಾಯಾ ಪರಿಕಲ್ಪನೆಯ ಆಭಾಸದ ಪರಿಣಾಮ ಹೆಣ್ಣಿನ ಪ್ರಮುಖವಾಗಿ ಅದರಲ್ಲೂ ಆಕೆಯ ಗುಣಾವಗುಣಗಳ ಪುರುಷ ನಿರೀಕ್ಷೆಯ ಮೇಲೆ ಉಂಟಾಗಿರುವುದನ್ನು ವಚನಪೂರ್ವದಲ್ಲಿಯೇ ಸ್ತ್ರೀ ಮಾಯೆ ಎಂಬ ತಾತ್ವಿಕ ದಾರ್ಶನಿಕ ಚಿಂತನೆಯಲ್ಲಿ ಅಪಾರ ಸಾಮಾಗ್ರಿ ದೊರೆಯುತ್ತಿದೆ. ಕೇವಲ ಧರ್ಮಗ್ರಂಥಗಳಲ್ಲಿ ವೇದ ಪುರಾಣಗಳಲ್ಲಿ ಅವತಾರಿಗಳ ಅಭಿಪ್ರಾಯಗಳಲ್ಲಿ ಮಾತ್ರವಲ್ಲ ಕವಿಗಳು

ವಾದಿಗಳು ವಾಗ್ಮಿಗಳು ಪ್ರಸಿದ್ಧ ವ್ಯಕ್ತಿಗಳು ಇವರ ಸ್ತ್ರೀಪರ ಧೋರಣೆಯನ್ನು ಒಟ್ಟಿನಲ್ಲಿ ಸಂಗ್ರಹಿಸಿದಲ್ಲಿ ಹೆಣ್ಣು ಮಾಯೆ ಎಂಬುದಕ್ಕೆ ಅನೇಕ ನೈತ್ಯಾತ್ಮಿಕ ಕಾರಣಗಳನ್ನು ಕಂಡುಕೊಳ್ಳುತ್ತಾರೆ.

ಹೆಣ್ಣು ಮಾಯೆ ಎಂಬುದು ವಚನಗಳಲ್ಲೂ ಕಂಡುಕೊಳ್ಳುವ ಪೂರ್ವದಲ್ಲಿಯೇ ವಚನಪೂರ್ವ ಅನೇಕ ದಾರ್ಶನಿಕರಿಂದ ದೊರೆತ ಅಭಿಪ್ರಾಯಗಳನ್ನು ಸಂಗ್ರಹಿಸಿದಾಗ ಸ್ತ್ರೀನಿಂದ ಆಕೆ ಮಾಯೆ, ವಿಶ್ವಾಸಕ್ಕೆ ಅರ್ಹಳಲ್ಲ. ಕೇವಲ ಪ್ರಲೋಭನೆಯ ವಸ್ತುವಾಗಿ ಲೋಕದಲ್ಲಿ ಸೃಷ್ಟಿಗೊಂಡಿದ್ದಾಳೆ ಎಂಬ ನಿಂದಾಸ್ಪದ ವಿಚಾರಗಳಿಗೆ ಆಧಾರ ಋಗ್ವದದಿಂದಲೇ ದೊರೆಯುತ್ತದೆ ಎಂದು ತಿಳಿಯಲಾಗಿದೆ.

ಜಗತ್ತಿನ ದೊಡ್ಡ ದೊಡ್ಡ ದಾರ್ಶನಿಕರು ಪ್ರವಾದಿಗಳು ಅವರು ಸಂಸಾರಿಗಳಾಗಿರಲಿ, ವಿರಾಗಿಗಳಾಗಿರಲಿ ಹೆಣ್ಣನ್ನು ಒಂದಲ್ಲೊಂದು ಮುಖದಲ್ಲಿ ನಿಂದಿಸಿದ್ದಾರೆ. ಆಕೆ ಪ್ರಬಲ ಮಾಯೆ ಪುರುಷನ ಆತ್ಮೋನ್ನತಿಗೆ ಅಡ್ಡಿ ಮಾಡಿ ಸಂಸಾರದಲ್ಲಿಯೇ ಸುತ್ತಿಸುವಳು. ಚಂಚಲತೆಯ ಪ್ರತೀಕ, ಸೋಮಾರಿತನ ಅಸ್ಥಿರತೆ ಅವಳ ವ್ಯಕ್ತಿತ್ವದ ಒಂದು ಅಂಗವಾಗಿಯೇ ಬಂದಿದೆ. ಲೋಲುಪತೆ, ವಂಚನೆ, ಮೋಸ ಆಕೆಯ ಸಹಜಗುಣ. ಬೆಂಕಿ, ಸಾಗರ, ಯಮ ಈ ಮೂವರು ಹೀಗೆ ಅತೃಪ್ತರು ಹಾಗೆಯೇ ಹೆಣ್ಣು ಅತೃಪ್ತಳು. ಮನು ಮೊದಲಾದ ಸೂತ್ರಕಾರರು ಹಾಗೂ ಕೆಲವು ಸಂಹಿತೆಗಳಲ್ಲಿ ಮತ್ತು ಜೈನ ಬೌದ್ಧ ಧರ್ಮಗಳ ಶಾಸ್ತ್ರ ಗ್ರಂಥಗಳಲ್ಲೂ ರಾಮಾಯಣ ಮಹಾಭಾರತಗಳಲ್ಲೂ ಸ್ತ್ರೀ ನಿಂದೆ ದೊರೆಯುವುದು. ನರನಿಗೆ ನಾರಿಗಿಂತ ಬೇರೆ ವೈರಿಯಿಲ್ಲ. ಸ್ತ್ರೀ ಪ್ರಾಬಲ್ಯವಿರುವ ದೇಶ ದುಃಖಕ್ಕೀಡಾಗುವುದು. ಜಾಣನು ಗಂಗೆಯ ಮಳಲನ್ನು ಎಣಿಸಬಹುದು, ಸಾಗರದ ನೀರನ್ನು ಅಳೆಯಬಹುದು, ಹಿಮಪರ್ವತದ ಗಾತ್ರವನ್ನು ತೂಗಬಹುದು, ಆದರೆ ಮಹಿಳೆಯ ಮನಸ್ಸನ್ನು ಅರಿಯುವುದು ದುರ್ಲಭ.

ಸಂಸ್ಕೃತ ಸುಭಾಷಿತಗಳಲ್ಲಿ ಭರ್ತೃಹರಿ ಶತಕದಲ್ಲಿ ಕಾಮಿನಿ, ಮಾಯೆ, ಸಂಶಯಗಳ ಮಡು, ಅವಿನಯದ ಅರಮನೆ, ಸಾಹಸಗಳ ಸಂಜೆ, ದೋಷ ಘಾತಕಗಳ ಭಂಡಾರ ನರಕದ ಮುಖ, ಸ್ವರ್ಗದ ವಿಘ್ನು ಎಂದೆಲ್ಲಾ ಸ್ತ್ರೀ ಸಂಬಂಧ ನಕಾರಾತ್ಮಕ ಚಿಂತನೆ ದೊರೆಯುವುವು, ಸ್ತ್ರೀ ಎಂಬ ಈ ಯಂತ್ರವನ್ನು ಯಾರು ಸೃಷ್ಟಿಸಿದರೋ ನಾಲಿಗೆಯ ಮೇಲೆ ಮಧು, ಹೃದಯದ ತುಂಬಾ ಹಾಲಾಹಲ ಎಂದಿದ್ದಾರೆ. ಪಾಶ್ಚಾತ್ಯ ದಾರ್ಶನಿಕರಲ್ಲೂ ಸ್ತ್ರೀ ನಿಂದೆ ಕಾಣುತ್ತೇವೆ. ಸಾಕ್ರೆಟಿಸ್, ಪೈಥಾಗೋರಸ್, ಸೋಫೋಕ್ಲಿಸ್, ಅರಿಸ್ಟಾಟಲ್ ಇಂತಹ ಪ್ರವಾದಿಗಳ ಬಾಯಿಯಿಂದಲೂ ಈ ತರಹದ ಮಾತುಗಳು ಬಂದಿವೆ.

ಹೆಣ್ಣು ಮಾಯೆ ಎಂಬ ನಿಂದಾತ್ಮಕ ಪರಿಕಲ್ಪನೆ ನಿಷ್ಪ್ರಪಂಚವಾದದ ಸಮರ್ಥನೆಗೆ ಕಾರಣವಾಗಿರುವುದನ್ನು ಕೇವಲ ಪುರುಷ ಚಿಂತನೆಯಲ್ಲಿ ಮಾತ್ರವಲ್ಲ ಗಂಡು ಹೆಣ್ಣಿಗೆ ಮಾಯೆ ಎಂಬ ಅಂಶ ತೀರಾ ಗೌಣವಾದರೂ ದುರ್ಬಲವೆನಿಸಿದರೂ ಬುದ್ಧನ ಕಾಲದ ಥೇರಿಯರು ಅಭಿವ್ಯಕ್ತಿಸಿದ ಅವರ ಥೇರೀ ಗಾಥಾಗಳನ್ನು ಅವಲೋಕಿಸಿದಾಗ ತಕ್ಕಮಟ್ಟಿಗೆ ಗುರುತಿಸಬಹುದು.

ಪ್ರಸ್ತುತ ವಚನಪೂರ್ವದ ಈ ಸ್ಥೂಲ ಸಮೀಕ್ಷೆಯಿಂದ ನಾವು ಮಾಯೆ ಸಂಸಾರಗಳ ಕುರಿತ ಚಿಂತನೆಯ ಸಾಮಾನ್ಯ ಗ್ರಹಿಕೆ ವೇದ ಪೂರ್ವದಿಂದಲೂ ವೇದ ಉಪನಿಷತ್ತುಗಳಲ್ಲಿ ರಾಮಾಯಣ ಮಹಾಭಾರತಗಳಲ್ಲಿ ಹಾಗೂ ಇತರ ಪ್ರಸಿದ್ಧ ಅವತಾರಿಗಳು ಕವಿ ವಾಗ್ಮಿಗಳಲ್ಲೂ ಹೇಗೆ ಸಾಗಿಬಂತು ಮಾಯೆ ಶಕ್ತಿಯಾಗಿ ಆರಾಧನೆಗೊಂಡ ಪರಂಪರೆ ಯಾವ ರೀತಿಯಲ್ಲಿ ಅವ್ಯಾಹತವಾಗಿ ಸಾಗಿದೆ. ಅದೇ ಶಕ್ತಿ ಮಾಯೆ ಎನಿಸಿ ನಿಷ್ಪ್ರಪಂಚವಾದಕ್ಕೆ ನೆಲೆಯಾಗಿ ಹೆಣ್ಣಿನ ಸಕಾರಾತ್ಮಕ ಗುಣ ನಿರೀಕ್ಷೆಗಳನ್ನೇ ಹೊತ್ತು ಸಾಗಿದ್ದು ಹೇಗೆ? ಶಕ್ತಿ ಮಾಯೆಯ ಮತ್ತೊಂದು ಮುಖವಾಗಿದ್ದರೂ ಸಪ್ರಪಂಚವಾದ ಈ ವಿಶ್ವ ಕುಟುಂಬ ಜೀವನ ಎಲ್ಲಾ ಸಾಧಕನ ಸಾಧನಾರಂಗ ಎಂಬ ಸಪ್ರಪಂಚವಾದಕ್ಕೂ ಯಾವ ರೀತಿ ಹಿನ್ನೆಲೆಯಾಗಿ ಸಾಗಿಬಂತು ಎಂಬುದನ್ನು ಕಂಡುಕೊಂಡಿದ್ದೇವೆ. ಮುಂದೆ ವಚನಕಾರರ ದೃಷ್ಟಿ ಮಾಯೆ ಸಂಸಾರಗಳ ಪರಿಕಲ್ಪನೆಯಲ್ಲಿ ಇದೇ ಹಿನ್ನೆಲೆಯಲ್ಲಿ ಹೇಗೆ ಸಾಗಿತು ಎಂಬುದನ್ನು ಗಮನಿಸಬಹುದು.

**ಹೆಣ್ಣು ಮಾಯೆ**

ವಚನಗಳಲ್ಲಿ ಹೆಣ್ಣು ಮಾಯೆ ಎಂಬುದಕ್ಕೆ ಹಲವಾರು ವಿಚಾರ ಚಿಂತನೆಗಳು ದೊರೆಯುತ್ತವೆ. ಹಲವು ರೀತಿಯಲ್ಲಿ ಸಾಧಕನನ್ನು ಸಾಂಸಾರಿಕ ಜೀವನ ಜಂಜಡದೊಳಗೆ ಸಿಕ್ಕಿಕೊಳ್ಳುವಂತೆ ಮಾಡಿದವಳು ಹೆಣ್ಣು. ತನ್ನ ಚೆಲುವು ಯೌವ್ವನ ಆಕರ್ಷಣೆಗಳ ಮೂಲಕ ಯೋಗಿ ಮಠಾಧೀಶ್ವರರನ್ನು ಸಾಧಕ ಸಂತರನ್ನು ಸೋಲಿಸುತ್ತಾಳೆ. ಮಾನವನ ಸಹಜ ಸೋಲು ಸೆಳೆತ ಲೌಕಿಕದ ಆಕರ್ಷಣೆಗೆ ಸೆಳೆವ ಮೊದಲ ಸಂಕೇತ ಈ ಹೆಣ್ಣು. ಹೆಣ್ಣು ಪ್ರಬಲ ಮಾಯೆ. ಜನಿತಕ್ಕೆ ತಾಯಾಗಿ, ಕೂಟಕ್ಕೆ ಸತಿಯಾಗಿ, ಮೋಹಕ್ಕೆ ಮಗಳಾಗಿ ಹುಟ್ಟಿ ಲೌಕಿಕದಲ್ಲಿ ಸುತ್ತಿಕೊಳ್ಳಲು ಕಾರಣಳಾಗುವಳು. ವೈರಾಗಿ ನಾನೆಂದು ತನ್ನ ತನುವಿನ ಚೇಷ್ಟೆಯ ಮೇಲೆ ನಿಗ್ರಹಶಕ್ತಿ ಇದೆ ಎಂದುಕೊಂಡ ಮಹಾಯೋಗಿಗಳನ್ನು ಹೆಣ್ಣು ಸೋಲಿಸಿದೆ. ಶಿವನೇ ಸ್ವತಃ ಅರ್ಧನಾರೀಶ್ವರನೆನಿಸಿಕೊಂಡಿದ್ದಾನೆ. ಬ್ರಹ್ಮದ ಮಾತಾಡುವವರನ್ನು ಬಾಲೆಯರ ಕಾಲದೆಸೆಯಲ್ಲಿ ಕುಳಿತುಕೊಳ್ಳುವಂತೆ ಮಾಡುತ್ತದೆ ಈ ಮಾಯೆ. ಬ್ರಹ್ಮಚಾರಿ ನಾನೆಂದು ಎದೆತಟ್ಟಿಕೊಳ್ಳುವ ಅಣ್ಣಗಳನ್ನು ಹಣ್ಣಿಸಿಬಿಡುವಳು ಮಾಯೆ. ಉರಿಯ ಮುಂದೆ ಕರಗುವ ಬೆಣ್ಣೆಯಂತೆ ಹೆಣ್ಣಿನ ಚೆಲುವು ಯೌವ್ವನಕ್ಕೆ ಕರಗಿ ವಿಷಯಾತುರನಾಗಿ ವ್ಯಕ್ತಿ ಕುಸಿದುಹೋಗುವನಲ್ಲದ ಅವಳ ಸವಿನುಡಿಯ ಶಸ್ತ್ರದಿಂದ ಆ ಶೃಂಗಾರದಿಂದ ಕಂಗೆಟ್ಟು ಲಿಂಗದ ನೆನಹನ್ನು ಮರೆತುಬಿಡುವನು. ಪಶುಪತಿಯ ಸಂಗದಿಂದ ದೂರಾಗುವನು. ಈಶ್ವರರತಿಯಿಂದ ಮನ ಇಬ್ಭಾಗವಾಗಿ ವಿಷಯರತಿಯಲ್ಲಿ ಮುಳುಗುವನು.

ಹೆಣ್ಣು ಮಾನವರನ್ನು ಮಾತ್ರವಲ್ಲ ದೇವದಾನವರನ್ನು ಸೋಲಿಸಿದಳು. ಹೆಣ್ಣಿನ ವಿಷಯಕ್ಕೆ ಬಣ್ಣಗೆಟ್ಟವರು ಕೋಟ್ಯಂತರ ಪ್ರಮಥ ಗಣಂಗಳ, ಅರಗಾಲ ಕಣ್ಣವರು, ಮೈಗಣ್ಣವರು, ನಂದಿ ವಾಹನ ರುದ್ರರು, ಹರಿಬ್ರಹ್ಮಾದಿಗಳು ಎಲ್ಲರನ್ನು ಸೋಲಿಸಿದೆ ಮಾಯೆ. ಬ್ರಹ್ಮನ ಬೆನ್ನಿಗಂಟಿಕೊಂಡಿದೆ,

ಸರಸ್ವತಿಯಾಗಿ ವಿಷ್ಣುವನ್ನು ಭವ ಭವದಲ್ಲಿ ತಿರುಗಿಸಿದೆ. ರುದ್ರನ ಅರ್ಧ ದೇಹವನ್ನೇ ಆಕ್ರಮಿಸಿದೆ. ಸರ್ವಾಂಗಪರಿತ್ಯಾಗಿಗಳು ನಾವೆಂದು ಹೇಳುವ ಯತಿ ಮುನಿ ತಪಸ್ವಿಗಳನ್ನು ಗುಹೆ ಗಹ್ವರಗಳಲ್ಲಿ ಕುಳಿತವರನ್ನು ಮಾಯೆ ಬಿಟ್ಟಿಲ್ಲ. ಯೋಗಿಗೆ ಯೋಗಿಣಿಯಾಗಿ, ಯತಿಗೆ ಪರಾಕಿಣಿಯಾಗಿ, ಶ್ರವಣನಿಗೆ ಶ್ರವಣಿಯಾಗಿ, ಭಗವನಿಗೆ ಮಾಸಕಬ್ಬೆಯಾಗಿ, ಕಂದಮೂಲ ತಿಂದವರನ್ನು ಸುತ್ತಿಕೊಂಡಿದೆ. ಹೆಣ್ಣು ಬಿಟ್ಟಿದ್ದೇವೆ ಎಂದು ಹೇಳುವವರ ಮನದ ಕೊನೆಯ ಮೊನೆಯ ಮೇಲೆ ಅವರ ಸುಪ್ತಪ್ರಜ್ಞೆಯಲ್ಲಿ ಹೆಣ್ಣಿನ ಧ್ಯಾನ ಚಿಂತನೆಗಳೇ ಕಾಡುತ್ತವೆ. ನವನಾಥಸಿದ್ಧರು, ಸಾಧುಗಳು, ದಂಡಕಮಂಡಲ ಹಿಡಿದು ತಲೆ ಬೋಳಿಸಿಕೊಂಡ, ಭಿಕ್ಷೆ ಬೇಡುವವರನ್ನು ಹೆಣ್ಣು ಬಿಟ್ಟಿಲ್ಲ. ಅಹಲ್ಯೆಯನ್ನು ಪೋಷಿಸಿದ ಚಂದ್ರಮ ಕುಷ್ಠರೋಗಿಯಾದ, ಮಾಯಾವಶನಾದ ಮಹಿಷಾಸುರ ಕುಮಾರಿ ಕೈಯಲ್ಲಿ ಹೊಡೆಸಿಕೊಂಡ, ವಿಕ್ರಮಾದಿತ್ಯ ಕಂಬಿಹೊತ್ತ, ಕುಲಮದದಿಂದ ಬೀಗಿದ ಮಯೂರನಿಗೆ ಚಂಡಾಲಗಿತ್ತಿ ಸತಿಯಾಗಿ ಕಾಡಿದಳು ಹೀಗೆ ವಚನಕಾರರು ಹೆಣ್ಣು ಮಾಯೆಯಾಗಿ ಕಾಡಿದ್ದನ್ನು ಕೇವಲ ಮಾನವರಲ್ಲಿ ಮಾತ್ರವಲ್ಲ ದೇವದಾನವರು ಯೋಗಿಮುನಿಗಳು ಪುರಾಣ ಪ್ರಸಿದ್ಧ ವ್ಯಕ್ತಿಗಳು ಹೆಣ್ಣಿನ ಮೋಹಕ್ಕೆ ಬಲಿಯಾಗಿ ಮಾಯಾ ವಶರಾಗಿರುವುದನ್ನು ಕಂಡುಕೊಳ್ಳುತ್ತಾರೆ. ಐದು ಕಿಚ್ಚುಗಳಲ್ಲಿ ಈಶಣತ್ರಯಗಳಲ್ಲಿ ಒಂದಾಗಿ ಪರಿಗಣಿಸಲಾಗಿದೆ ಹೆಣ್ಣು.

ವಿರಕ್ತರಿಗೆ ಹೆಣ್ಣು ಸಂಪೂರ್ಣ ಮಾಯೆಯಾಗಿ ಕಾಡಿದರೆ ಸಂಸಾರಿಗಳಿಗೆ ಆಕೆಯ ಅವಿಶ್ವಾಸ ಅಪನಂಬಿಕೆ ಅವಗುಣಗಳು ಭವಿತನ ನಟನೆ ಇವು ಮಾಯೆಯಾಗಿ ಕಾಡಿವೆ. ದುಷ್ಟ ಸತಿ ಭಕ್ತಿ ಸಾಧನೆಗೆ ಅಡ್ಡಿ ಎಂಬುದನ್ನು ಆಕೆಯ ಅವಗುಣಗಳನ್ನು ಎತ್ತಿ ತೋರಿಸುತ್ತಾ ಪ್ರಬಲ ಮಾಯೆಯಾಗಿ ಭಕ್ತಿ ಸಾಧನೆಯಲ್ಲಿ ಶರಣನನ್ನು ದಿಕ್ಕುಗೆಡಿಸಿದ್ದಾಳೆ ಎಂಬುದಕ್ಕೆ ಹಲವು ರೀತಿಯ ವಚನಗಳಲ್ಲಿ ಬರುವ ಪತ್ನಿಯರ ಅವಗುಣಗಳ ಪಟ್ಟಿ ದೊರೆಯುತ್ತದೆ. ಶರಣ ತನ್ನ ಭಕ್ತಿಸಾಧನೆಗೆ ಆಕೆ ಎಲ್ಲ ಹಂತದಲ್ಲೂ ಜೊತೆ ಕೊಡಬೇಕು ಎಂಬುದು ಅವನ ಹಾರೈಕೆ. ಸತಿಪತಿಗಳು ಒಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ಮಾತು ವಚನ ಸಾಹಿತ್ಯದಲ್ಲಿ ಜನಜನಿತ. ಪತ್ನಿ ಪತಿ ಶರಣ ಮಾರ್ಗದಲ್ಲಿದ್ದಾಗ ತಾನು ಅನ್ಯಮಾರ್ಗ ಅನುಸರಿಸಿ ಅನ್ಯದೈವಗಳ ಉಪಾಸಕಿಯಾಗುವುದು ಮಾರಿ ಮಸಣಿಯ ಭಕ್ತೆಯಾಗುವುದು ಗಂಡಪಾದೋದಕ ಪ್ರಸಾದಗಳನ್ನು ಪಡೆದಲ್ಲಿ ತಾನು ಸುರೆ ಮಾಂಸ ಸೇವಿಸುವುದು ಜಂಗಮರ ಸೇವೆ ಮಾಡಲು ಹೇಳಿದಾಗ ಗೊರವರಿಗೆ ಹಿಂಡು ದೈವಗಳಿಗೆ ಉಣಲಿಕ್ಕುವುದು, ತನ್ನ ಕುಲದೇವರು ಬೇರೆ ಪತಿಯ ಕುಲದೇವರು ಬೇರೆ ಎಂದು ನಂಬಿ ಆಚರಿಸುವುದು ಸಹಬಾಳ್ವೆಗೆ ಜೊತೆಯಾಗದೆ ವಿರಸಕ್ಕೆ ಎಡೆಮಾಡುವುದು ಇಂತಹ ಸತಿಯನ್ನು ಭವಿಸತಿ ಎಂದು ಕರೆದು ಆಕೆಯ ಭವಿತನ ಶರಣನ ಪಾಲಿಗೆ ಮಾಯೆಯಾಗಿ ಕಾಡುತ್ತದೆ.

ಪತ್ನಿಯರ ಅನೇಕ ಅವಗುಣಗಳನ್ನು ವಚನಗಳಲ್ಲಿ ಕಾಣುತ್ತೇವೆ. ಪತಿ ತಂದ ವಸ್ತು ದವಸ ಧಾನ್ಯಗಳನ್ನು ಬಳಸಿ ಮಕ್ಕಳನ್ನು ಮನೆಯನ್ನು ತೃಪ್ತಿಗೊಳಿಸಿದೆ ಅವುಗಳನ್ನು ಮಾರಿ ತನ್ನ ಮಾನ ಕಳೆದುಕೊಳ್ಳು ಹೆಣ್ಣು ತನ್ನ ಮನೆಗೆ ತಾನು ಕನ್ನಹಾಕಿದಂತೆ. ಗಂಡ ಬಂದಾಗ ಅವನಿಗೆ ಉಣಬಡಿಸದೆ ಆರೈಕೆ ಮಾಡದೆ ಅವನು ಹೋದ ಬಳಿಕ ಅಯ್ಯೋ ನನ್ನ ಗಂಡ ಬಡವಾಗಿದ್ದಾನೆ ಎಂದು ಬಹಿರಂಗದಲ್ಲಿ ಕೊರಗನ್ನು ನಟಿಸುವ ಅಂತರಂಗದಲ್ಲಿ ಅವನನ್ನು ಅಲಕ್ಷಿಸುವ ಸತಿ ಆ ಪುರುಷನಿಗೆ ಮಾಯೆ. ಕಂಡಕಂಡವರ ಮನೆಗೆ ತಿರುಗುವ ಹಲವರ ಕಣ್ಣಿನ ಆಹಾರವಾಗುವುದು ಅಂಕೆಯಿಲ್ಲದೆ ಹರಿದಾಡುವುದು ಅಣಜಿಕೆಯಿಲ್ಲದೆ ತಿರುಗುವ ಹೆಂಡತಿಯನ್ನು ಶರಣರು ಚಂಡಾಲಗಿತ್ತಿ ಎಂದಿದ್ದಾರೆ. ಹೆಣ್ಣಿನ ಈ ಚಾಂಚಲ್ಯ ಗಂಡನಾದವನಿಗೆ ದೊಡ್ಡ ತಲೆನೋವು. ಜಾರೆಯಾದ ಆಕೆಯನ್ನು ಬೋಸರಗಿತ್ತಿ ಎಂದು ಕರೆಯುತ್ತಾರೆ. ಒಬ್ಬನಿಗೆ ಮಾತು ಕೊಡುತ್ತಾಳೆ ಮತ್ತೊಬ್ಬನನ್ನು ಕೈಹಿಡಿಯುತ್ತಾಳೆ, ಇನ್ನೊಬ್ಬನಿಗೆ ಸನ್ನೆ ಮಾಡುತ್ತಾಳೆ. ಗಂಡನಾದವನಿಗೆ ತಾನು ಸತ್ತ ಮೇಲೆ ಇವಳು ಇನ್ನೊಬ್ಬರ ಪಾಲಾಗುವಳು. ಅರಸನಿಗೆ ತಾನು ಗಳಿಸಿಟ್ಟ ಧನಕನಕವನ್ನು ಈಕೆ ಸೂರೆಮಾಡುತ್ತಾಳಲ್ಲಾ ಎಂಬ ಚಿಂತೆ. ಇಂತಹ ಹೆಣ್ಣಿನ ಸ್ಥಿತಿ ಮರ ಏರಿ ಕೈಬಿಟ್ಟಂತೆ ಸಮಾಜದಲ್ಲಿ ಅಧೋಗತಿಯೇ ಆಕೆಯ ಸ್ಥಾನ ಎನ್ನುತ್ತಾರೆ. ಮಾತು ಸಿಹಿಯಾಗಿದ್ದರು ಮನದಲ್ಲಿ ಅನ್ಯರ ಧ್ಯಾನಚಿತ್ತದಲ್ಲಿ ಒಬ್ಬನನ್ನು ಧ್ಯಾನಿಸುತ್ತಾ ಮತ್ತೊಬ್ಬನಿಗೆ ಹೆಂಡತಿಯಾಗುವುದು ಮಾನಸಿಕ ಹಾದರವಲ್ಲವೇ? ಎನ್ನುತ್ತಾರೆ.

ಹೀಗೆ ತಾನು ಕೈಹಿಡಿದ ಪತ್ನಿಯ ಬಗ್ಗೆ ತನ್ನ ಗಮನಕ್ಕೆ ಬಂದ ಅವಗುಣಗಳನ್ನು ಎತ್ತಿ ತೋರಿಸುತ್ತಾ ಅವಳು ತನ್ನ ಪಾಲಿಗೆ ಮಾಯೆ ಎಂದಿರುವ ಶರಣರು ತಾವು ಪರಸತಿಯರ ದೃಷ್ಟಿಯಲ್ಲಿ ಹೇಗೆ ನಿಷ್ಠಾವಂತರಾಗಿ ನಡೆದುಕೊಳ್ಳಬೇಕು, ಯಾವ ರೀತಿ ಎಚ್ಚರವಹಿಸಬೇಕು ಸಮಾಜನೀತಿಗೆ ಪ್ರತಿಯೊಬ್ಬ ಶರಣ ಹೇಗೆ ಬದ್ಧನಾಗಬೇಕು ತನ್ನ ಮನ ವರ್ತನೆಗಳನ್ನು ಅಂಕೆಯಲ್ಲಿಟ್ಟುಕೊಳ್ಳಬೇಕು ಎಂಬುದನ್ನು ಹೇಳುತ್ತಾರೆ. ಪರಸ್ತ್ರೀಯನ್ನು ಮೋಹಿಸಿ ಹಾಳಾದವರ ಉದಾಹರಣೆಗಳನ್ನು ಶರಣರು ಎತ್ತಿ ತೋರಿಸಿದ್ದಾರೆ. ಬಲೀಂದ್ರನ ಸಿರಿತನ, ಕೌರವನ ಸಂಪತ್ತು, ರಾವಣನ ಬಿಲ್ಲಾಳುತನ ಇವುಗಳಿಗೆ ಲೋಕದಲ್ಲಿ ಸಮಾನ ಮತ್ತೊಂದಿರಲಿಲ್ಲ. ಆದರೆ ಪರಸ್ತ್ರೀಯರನ್ನು ಮೋಹಿಸಿ ಅವರು ಹಾಳಾದರು.

ಒಟ್ಟಿನಲ್ಲಿ ಹೆಣ್ಣು ಮಾಯೆಯೆಂಬುದು ಶರಣರ ದೃಷ್ಟಿಯಲ್ಲಿ ಆಕೆಯ ಆಕರ್ಷಣೆ ಯೌವ್ವನಗಳು ಇವು ಮಾತ್ರವಲ್ಲ. ಆಕೆಯ ಸಾಮಾಜಿಕ ನಡೆನುಡಿಗಳು ಅವಗುಣಗಳು ಭಟಿತನ ಅವಿವೇಕ ಇವೆಲ್ಲವು ಪುರುಷನಿಗೆ ಮಾಯೆಯಾಗಿ ಕಾಡುತ್ತವೆ ಎಂದಿರುವರಲ್ಲದೆ ಗಂಡಿಗೆ ಹೆಣ್ಣು ಮಾಯೆಯಾಗಿರುವಂತೆ ಹೆಣ್ಣಿಗೆ ನೀತಿ ತಪ್ಪಿದಲ್ಲಿ ಗಂಡು ಮಾಯೆಯಾಗಿ ಕಾಡುವುದು. ಅಷ್ಟೇ ಅಲ್ಲದೆ ಪರಪುರುಷ ಸ್ತ್ರೀಗೆ ಪರಸತಿ ಪುರುಷನಿಗೆ ಮಾಯೆ ಕಾರಣ ಶರಣ ಶರಣೆ ಪರಸ್ತ್ರೀ ಪರಪುರುಷ ಬಗ್ಗೆ ಮನವನ್ನು ಅಂಕಿಯಲ್ಲಿಟ್ಟುಕೊಂಡು ಸಾಮಜಿಕ ನೀತಿ ವರ್ತನೆಗಳನ್ನು ಮನ್ನಿಸಿ ನಡೆದುಕೊಳ್ಳಬೇಕು ಎನ್ನುತ್ತಾರೆ.

ಹೆಣ್ಣಿನ ಮೋಹಕ್ಕೆ ಒಳಗಾದ ಗುರು ಕೇವಲ ನರನು ಗುರುವಿನ ಗೌರವ ಅವನಿಗೆ ಸಲ್ಲದು. ಜಂಗಮ ಹೆಣ್ಣಿಗೆ ಒಳಗಾದಲ್ಲಿ ಲುಬ್ಧಕ ನೆನಿಸಿಕೋಳ್ಳುತ್ತಾನೆ. ಲಿಂಗವೂ ಪ್ರವೃತ್ತಿಗಾಗಿ ತನ್ನ ಸ್ವಯಂಭೂ ಸ್ಥನದಿಂದ ಕೆಳಗಿಳಿದು ಕಲ್ಲಾಗುತ್ತದೆ.

ಮಾಯೆಯನ್ನು ಮಾರಿ ಎಂದಿದ್ದಾರೆ ಶರಣರು. ಇವಳು ನಿದ್ರಾಂಗನೆಯಾಗಿ ಹಲವು ಮುಖಗಳಲ್ಲಿ ಮೋಹ ಬೀರಿ ಮಾನವನನ್ನು ಹಿಂಡಿ ನಿರ್ಜೀವಗೊಳಿಸುತ್ತಾಳೆ. ರಾಕ್ಷಸಿ ಎನಿಸಿ ವೀರಾಧಿವೀರರ ಧೃತಿಗೆಡಿಸಿ ಲೋಕ ಹಾಳು ಹಾಲು ಮಾಡುತ್ತಾಳೆ.

ಹೀಗೆ ಶರಣರ ದೃಷ್ಟಿಯಲ್ಲಿ ಹೆಣ್ಣು ಹೇಗೆ ಹಲವು ರೂಪಗಳಲ್ಲಿ ಮಾಯೆಯಾಗಿದೆ, ಆಕೆಯ ಅವಗುಣ ಅನೀತಿ ನಡೆನುಡಿಗಳು, ನಿಷ್ಠೆಯಿಲ್ಲದ ಬದುಕು, ನಂಬಿಕೆಯಿಲ್ಲದ ದಾಂಪತ್ಯಜೀವನ, ಪತಿ ದೇವರೆಂದು ಭಾವಿಸಿ ಸರ್ವೋಪಚಾರಶೀಲೆಯಾಗಿ ಬಾಳದಿರುವುದು ಪಾಕಪ್ರಾವೀಣ್ಯತೆ ಪಡೆಯದೆ ಸೂಕ್ತ ಅತಥಿ ಸತ್ಕಾರ ಪತಿಸೇವೆ ಮಾಡದೆ ಅನ್ಯೋನ್ಯ ದಾಂಪತ್ಯ ಜೀವನಕ್ಕೆ ಜತೆಕೊಡದೆ, ಧಾರ್ಮಿಕ ಸಾಹಚರ್ಯ ಪಾಲಿಸದೆ ರತಿಸೌಖ್ಯಕ್ಕೆ ಅನುಕೂಲಳಾಗದೆ ಹೋಗುವುದು–ಹೀಗೆ ಹಲವು ಪತ್ನಿಯಲ್ಲಿ ಬಯಸಿದರೂ ದೊರೆಯದೆ ಹೋದಾಗ ಆಕೆ ಗಂಡನ ಪಾಲಿಗೆ ಮಾಯೆಯಾಗುವುದು ಸಹಜವೇ.

**ಕಾಮ ಮಾಯೆ**

ಜಗದ ಸೃಷ್ಟಿ ಕ್ರಿಯೆ ಕಾರಣವಾಗಿರುವ ಜೀವಜೀವನದ ಪರಂಪರೆ ಮುಂದುವರೆಸಲು ಕಾರಣವಾದ ಪ್ರಬಲಪ್ರವೃತ್ತಿ ಕಾಮ. ಇದು ಎಲ್ಲ ಜೀವರುಗಳಲ್ಲಿ ಪ್ರಬಲಶಕ್ತಿಯಾಗಿ ಪ್ರವರ್ತಿಸಿದೆ. ಆದರೆ ಮಾನವನ ಕಾಮಪ್ರವೃತ್ತಿ ಕೇವಲ ಸೃಷ್ಟಿ ಕ್ರಿಯೆಯ ಸಂತಾನ ಅಭಿಲಾಷೆಯ ಉದ್ದೇಶಕ್ಕಾಗಿ ಮಾತ್ರವಲ್ಲ, ಅದು ಅವನ ಚಪಲತೆ ಚಾಂಪಲ್ಯ ಸೋಲು ಅವಗುಣಗಳ ಆಗರವಾಗುತ್ತದೆ. ಇಂದರಿಂದ ಸಮಾಜ ನೀತಿ ವ್ಯಕ್ತಿ ಚಾರಿತ್ರ್ಯ ಮುಸುಕಾಗಿ ಧರ್ಮ ಮಾರ್ಗ ಮಾರ್ಗವೆನ್ನುವುದು ವಿಮುಖವಾಗಿ ವ್ಯಕ್ತಿಯನ್ನು ಸಮಾಜವನ್ನು ಅಧೋಗತಿಗಿಳಿಸಲು ಅನಾಗರೀಕ ಎನಿಸಲು ಕಾರಣವಾಗುತ್ತದೆ. ಇದೇ ಕಾಮಪ್ರವೃತಿ ಇತರ ಚರಾಚರ ಜೀವಿಗಳಲ್ಲಿ ಪ್ರತ್ಯಕ್ಷ ಪರೋಕ್ಷ ಸರ್ವವ್ಯಾಪಿಯಾಗಿದ್ದರೂ ಮಾನವ ಜನಾಂಗದಲ್ಲಿ ಇದರ ಅಧೋಮುಖವನ್ನು ಅವನತಿಯ ಸಂಕೇತಗಳನ್ನು ಕಾಣುವುದು ವ್ಯಾಪಕವಾಗಿದೆ. ಈ ಪ್ರವೃತ್ತಿಯ ಪ್ರಬಲತೆಯಿಂದ ವ್ಯಕ್ತಿ ಹಲವಾರು ದುರ್ಗುಣಗಳ ದುಷ್ಟ ಪ್ರವೃತ್ತಿಯ ದಾಸನಾಗುತ್ತಾನೆ. ಶತಮಾನಗಳಿಂದ ಧರ್ಮನೀತಿ ಶಾಸ್ತ್ರಗಳು ಕಾಮದ ಸದುದ್ದೇಶ ಹಿತಮಿತ ಬಳಕೆ ಬೋಧಿಸುತ್ತಾ ಬಂದಿದ್ದರೂ ಉದ್ಧಟ ಸ್ವೇಚ್ಛಾ ಪ್ರವೃತ್ತಿಯ ವರ್ತನೆಯಿಂದ ವ್ಯಕ್ತಿ ಸಮಾಜಘಾತುಕನಾಗಿ ಪರಿಣಮಿಸಿದ ಕಥೆ ಪುರಾಣ ಚಿತ್ರಗಳ ಕೊರತೆಯಿಲ್ಲ.

ಮಿತಿ ತಪ್ಪಿದ ಕಾಮ ಪ್ರವೃತ್ತಿ ವ್ಯಕ್ತಿಯ ಸಾವಿರ ಸದ್ಗುಣಗಳನ್ನು ಅಳಿಸಿಹಾಕುತ್ತದೆ. ಹಲವು ರೀತಿಯ ವ್ರತ ನಿಯಮಗಳನ್ನು ಪಾಲಿಸಿದರು ಹಾದರದಲ್ಲಿ ಎಲ್ಲ ಅಳಿಸಿಹೋಗುತ್ತವೆ ಎನ್ನುತ್ತಾರೆ ವಚನಕಾರರು. ಕಾಮಾತುರರಿಗೆ ಕಣ್ಣು ಮನ ನಾಲಿಗೆ ಯಾವುವು ಸ್ವಾಧೀನದಲ್ಲಿರುವುದಿಲ್ಲ. ದುಷ್ಟ ಕಾಮನ ಕೋಟಲೆಗೆ ಈಡಾದವನು ಹೆಂಡತಿಯಿದ್ದು ಅನ್ಯ ವಧುವಿಗೆ ಅಪೇಕ್ಷಿಸುತ್ತಾನೆ. ಮೀನಕೇತನನ ಬಲೆಗೆ ಸಿಲುಕಿದವನು ತುಡುಗುಣಿತನದಲ್ಲಿ ಅನ್ಯ ಹೆಣ್ಣುಗಳನ್ನು ನೋಡುತ್ತಾನೆ. ಈ ಕಾಮನೆಂಬ ವೈರಿ ಸಂಸಾರಿ ಕಾಂತಾರದೊಳಗೆ ಅವನನ್ನು ನೂಕಿ ದಾರಿಕಾಣದಂತೆ ಮಾಡಿ ದಿಕ್ಕು ತಪ್ಪಿಸುತ್ತಾನೆ. ಮುಕ್ತಿ ಸಾಧನೆಗೆ ಅಡ್ಡಿಯಾಗಿ ಪ್ರತಿ ತಲೆಮಾರಿಗೂ ಇದು ತಪ್ಪದೆ ಕಾಡುತ್ತದೆ. ಭವಕ್ಕೆ ಬೀಜವಾಗಿ ಭಕ್ತಿಯಿಂದ ಅವನನ್ನು ಹಿಮ್ಮೆಟ್ಟಿಸಿ ಸೊಣಗನ ಹಿಂದೆ ಸೊಣಗ ಹರಿವಂತೆ ನಾಯಿತನದ ವರ್ತನೆಗೆ ಈಡುಮಾಡುತ್ತದೆ. ಮದನನಿಗೆ ಮಾರುಹೋಗುವುದು ಎಂದರೆ ಎಲ್ಲವನ್ನು ಒಪ್ಪಿಸಿಕೊಟ್ಟಂತೆ ಹಗೆಯ ಮುಂದೆ ಸೋಲೊಪ್ಪಿದಂತೆ. ಇದು ಕ್ರಮೇಣ ಸಂಚಿನಿಂದ ಎಲ್ಲವನ್ನು ಸೆಳೆದುಕೊಂಡು ಇದುರಾಳಿಯನ್ನು ನಿರ್ಜೀವ ಮಾಡಿ ಪಂಚೇಂದ್ರಿಯಗಳನ್ನೇ ಕೈವಶಮಾಡಿಕೊಳ್ಳುತ್ತದೆ.

ಆಕೆಯ ಅವಗುಣಗಳಲ್ಲಿ ಕಾಮ ಪ್ರಧಾನವಾಗಿ ಗಂಡ ಸತ್ತ ಮುರುದಿನವೇ ಇನ್ನೊಬ್ಬನಿಗೆ ಒಲಿದು ಆ ಸಂಪತ್ತನ್ನು ಅವನಿಗೆ ಕೊಡುತ್ತಾಳೆ. ಪುರುಷನ ಯೌವ್ವನ ಆಕರ್ಷಣೆ ಇದುವವರೆಗೆ ಮಾತ್ರ ಅವನನ್ನು ಪ್ರೀತಿಸುವಳು. ಅರಸನಿಗೆ ತನ್ನ ಸರ್ವಸ್ವವನ್ನು ಒಪ್ಪಿಸಿ ಬಲಿಯಾಗುವಳು.ಕಾಮ ಪ್ರವೃತ್ತಿ ಅಧಿಕಾರದ ಜತೆ ಉದ್ದೀಪನಗೊಂಡು ಹೆಣ್ಣು ಹಲವು ಕಪ್ಪಕಾಣಿಕೆಗಳಲ್ಲಿ ಒಂದಾಗಿ ರಾಜಮಹಾರಾಜರು ಹಲವು ಹೆಣ್ಣುಗಳ ಅಪೇಕ್ಷೆಗೆ ಈಡಾಗಿರುವುದು ಲಂಪಟತನ ಮೆರೆದಿರುವರಲ್ಲದೆ ಅದನ್ನು ಶಾಸನ ರೂಪದಲ್ಲಿ ಪಾಲಿಸಲು ಅಧಿಕಾರ ಚಲಾಯಿಸುತ್ತಾರೆ.ಪುರಾಣಗಳಲ್ಲಿ ಇದರ ಪೈಪೋಟಿ ನಡೆದು ಒಬ್ಬನಿಗೆ ಎಷ್ಟು ಜನ ಹೆಂಡಿರಿದ್ದರೂ ಮಾನ್ಯ. ಅದಕ್ಕೆ ಧರ್ಮಶಾಸ್ತ್ರ ಸಂಪ್ರಾದಯಗಳ ಪರದೆ ಎಳೆದಿದ್ದಾರೆ.

**ಹೊನ್ನು, ಹೆಣ್ಣು, ಮಣ್ಣು ಮಾಯೆ**

ಭಕ್ತನಿಗೆ ಮಾಯಾನಿರಸನದ ಹಾದಿಯಲ್ಲಿ ಸಾಗುವಾಗ ಹೆಜ್ಜೆ ಹೆಜ್ಜೆಗೆ ಅಡ್ಡಿ ಆತಂಕಗಳು ಆಪತ್ತು ವಿಪತ್ತುಗಳು ಎದುರಾಗುತ್ತವೆ. ಯಾವುದು ಬಲವಂತ ಮಾಯೆ ಪ್ರಧಾನವಸ್ತು ಅದು ನನ್ನನ್ನು ಶರಣ ಮಾರ್ಗದಿಂದ ವಿಮುಖಗೊಳಿಸಲು ಹಲವು ರೂಪಗಳಲ್ಲಿ, ಕ್ರಿಯೆಗಳಲ್ಲಿ ಕಾಡಿದೆ ಎಂದುಕೊಳ್ಳುವನೋ ಅಂತಹ ಪ್ರಬಲ ಮಾಯೆ ಮೊದಲು ಅವನ ಗಮನಕ್ಕೆ ಬರುವುದು ತನ್ನ ಒಡನಾಡಿಯಾದ ಹೆಣ್ಣು. ಹೆಣ್ಣಿನ ಚೆಲುವು, ಯೌವ್ವನ, ಅಂಗಾಂಗ ಸೌಂದರ್ಯ ವರ್ತನೆ ವೈಯಾರಗಳಿಂದ ಮನಸೋಲಬಾರದೆನಿಸಿದರೂ ಜಾರುತ್ತಿರುವ ತನ್ನ ಮನಸ್ಸನ್ನು ಲಕ್ಷಿಸದೆ ತನ್ನೊಳಗೆ ಹುಟ್ಟಿ ತನ್ನ ಸಹಜ ಸೃಷ್ಟಿ ಪ್ರಕ್ರಿಯೆಗೆ ಕಾರಣವಾದ

ಜೀವಧರ್ಮದ ಕಾಮಪ್ರವೃತ್ತಿಯ ಮೂಲಕ ಹೆಣ್ಣು ಈ ರೀತಿ ಕಾಣುತ್ತಿದೆ ಎಂಬುದನ್ನು ಗ್ರಹಿಸದೆ ತನ್ನ ಸೋಲನ್ನು ತಾನು ಮಾಯಾವಶವಾಗುವುದನ್ನು ಹೆಣ್ಣಿನ ಮೇಲೆ ಆರೋಪಿಸುತ್ತಾನೆ.

ಮುಂದೆ ಕ್ರಮೇಣ ಹೆಣ್ಣಿನ ಮೂಲಕವಾಗಲಿ ಅಥವಾ ಐಹಿಕ ಸುಖ ಸಮೃದ್ಧಿ ಸ್ಥಾನಮಾನಗಳ ಸೆಳೆತದಿಂದಾಗಲಿ ತನ್ನನ್ನು ಸೋಲಿಸುತ್ತಿರುವ ಅಂಶಗಳು ಬರಿ ಹೆಣ್ಣು ಮಾತ್ರವಲ್ಲ ಮಣ್ಣು ಹೊನ್ನು ಕೂಡ ಎಂಬುದು ಅವನ ಮನನಕ್ಕೆ ಬರುತ್ತದೆ. ಲೌಕಿಕ ಜೀವನದಲ್ಲಿ ಸಾಮಾನ್ಯ ಮನುಷ್ಯನಾಗಿ ಆಗಲಿ ಸಹಜ ಜೀವಧರ್ಮದ ರೀತಿ ನೀತಿಯಿಂದ ಬದುಕಲು ಹೊರಟಾಗ ಅವನ ಪಾಲಿಗೆ ಸಹಜವಾಗಿಯೇ ಆರ್ಥಿಕ ಸೌಲಭ್ಯಗಳು ಸಾಮಾಜಿಕ ಸ್ಥಾನಮಾನಗಳು ಹಾಗೆಯೇ ರಾಜಕೀಯ ಅಧಿಕಾರ ಇವು ಕೇವಲ ಹೆಣ್ಣಿನಿಂದ ಸುತ್ತಿಕೊಳ್ಳುವುವು ಮಾತ್ರವಲ್ಲ ತನ್ನ ಬದುಕಿಗೆ ಸಮಾಜಜೀವಿಯಾಗಿ ಬಾಳುವುದಕ್ಕೆ ಇವೆಲ್ಲಾ ಅಗತ್ಯ ಎಂದುಕೊಂಡಾಗ ಹೊನ್ನು ಮಣ್ಣುಗಳು ಕೂಡಾ ಅವನನ್ನು ಮನಸೆಳೆದು ವಶಮಾಡಿಕೊಳ್ಳುವುದರಿಂದ ಹೊನ್ನು ಹೆಣ್ಣು ಮಣ್ಣು ಮೂರು ತನಗೆ ಮಾಯೆಯಾಗಿ ಕಾಡುತ್ತಿವೆ ಎಂಬುದನ್ನು ಗ್ರಹಿಸುತ್ತಾನೆ.

ಹೊನ್ನು ಹೆಣ್ಣು ಮಣ್ಣು – ಈ ಮೂರು ಆಶಾಪಾಶದಲ್ಲಿ ಸಿಲುಕಿದವರಿಗೆ ತನ್ನವರು ಅನ್ಯರು ಎನಿಸುತ್ತಾರೆ. ಇವು ಸರಿದ ಬಳಿಕ ಅನ್ಯರು ತನ್ನವರಾಗುತ್ತಾರೆ. ತಂಬೂರಿಯ ನಾದಕ್ಕೆ ಒಲಿಯುವ ಕುಣಿಯುವ ನಟನಂತೆ ಹೊನ್ನು ಹೆಣ್ಣು ಮಣ್ಣುಗಳ ನಾದಕ್ಕೆ ಮನುಷ್ಯ ಕುಣಿಯುತ್ತಾ ಹೋಗುವನು. ಇವೇ ತನ್ನ ಪರಮಬಂಧುಗಳೆಂದು ನಂಬುವನು. ಇವುಗಳಿಗಾಗಿಯೇ ಲೋಕದಲ್ಲಿ ಸತ್ತವರು ಕೋಟಿ ಕೋಟಿ. ಆದರೆ ದೇವರಿಗಾಗಿ ಸತ್ತವರು ಯಾರೂ ಇಲ್ಲ ಎನ್ನುತ್ತಾರೆ ವಚನಕಾರರು.

ಹೊನ್ನು ಹೆಣ್ಣು ಮಣ್ಣು ಮೂರು ಪಡೆದು ಅವುಗಳನ್ನು ಭೋಗಿಸಬಾರದು ಎಂದು ಹೇಳುವವರ ಬೆಡಗು ಅರ್ಥವಾಗದು. ಇವುಗಳ ಸೊಕ್ಕಿಗೆ ಸಿಕ್ಕಿಸಿ ಕಾಡುವುದಕ್ಕೆ ಮುಂದಾಗಿರುವ ಕಾಲನನ್ನು ಹೇಗೆ ಗೆಲ್ಲಬೇಕು ಎಂದರೂ ಇವುಗಳಿಗೆ ವಶನಾಗುವ ಮಾಯೆ ತಪ್ಪದು.

**ಮನವೇ ಮೂಲ ಮಾಯೆ**

ಹೆಣ್ಣು ಮಾಯೆ, ಹೊನ್ನು ಮಣ್ಣು ಮಾಯೆ, ಸಂಸಾರ ಮಾಯೆ ಆಸೆ ಆಮಿಶಗಳು ಮಾಯೆ, ಕಾಮ ಪ್ರಬಲ ಮಾಯೆ ಎಂಬುದನ್ನು ಇಲ್ಲಿಯವರೆಗೆ ಸಂಕ್ಷೇಪವಾಗಿ ಗ್ರಹಿಸಿದ ಬಳಿಕ ಇವೆಲ್ಲವುಗಳ ಮೂಲ ಕೇಂದ್ರಸ್ಥಾನ ಬೀಜಮಂತ್ರ ಮಾಯೆಯಾಗಿ ಪರಿಣಮಿಸುವುದು. ಅದಕ್ಕೆ ಕಾರಣ ಮಾನವನ ಮನಸ್ಸು. ಈ ಮನಸ್ಸನ್ನು ಕುರಿತು ಚಿತ್ರ ಬುದ್ಧಿ ಅಹಂಕಾರ ಇತ್ಯಾದಿ ರೂಪಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಾ ಹೋಗಿದ್ದರೂ ಮನದ ಮೂಲಕ ಅಭಿವ್ಯಕ್ತಿಸುವ ಆಚರಿಸುವ ಜಗದಲ್ಲಿ ಹೋರಾಡುವ ಬದುಕಿ ಬಾಳುವ ಐಹಿಕ ಪಾರಮಾರ್ಥಿಕ ಸಾಧನೆಗಳನ್ನು ಸಾಧಿಸಲು ಹೊರಟ ವ್ಯಕ್ತಿಯ ಗುಣಾವಗುಣಗಳು ಅವುಗಳ ಕೇಂದ್ರ

ಬಿಂದು ಮನವೇ ಆಗಿದ್ದು ತನ್ನ ಸಂಕಲ್ಪ ವಿಕಲ್ಪಗಳಿಂದ ವಿಕಾರಕ್ಕೆ ವಿನಾಶಕ್ಕೆ ವಿಕಾಸಕ್ಕೆ ಮುಕ್ತಿ ವಿರೋಧವಾಗಿ ಭಕ್ತಿ ಸಾಧಿಸಲು ಅಡ್ಡಿಯಾಗುತ್ತಾ ಮಾನವನನ್ನು ಈ ಜೀವನನ್ನು ದಿಕ್ಕುಗೆಡಿಸುವುದು ಈ ಮನವೇ ಎಂಬುದನ್ನು ಎಲ್ಲ ಶರಣರ ಪ್ರಮುಖ ವಚನಕಾರರ ಅನುಭಾವ ನುಡಿಗಳಲ್ಲಿ ದಟ್ಟವಾಗಿ ಅಭಿವ್ಯಕ್ತಿಗೊಂಡಿದೆ. ಮನದ ಚೇಷ್ಟೆಯನ್ನು ಮನದ ವ್ಯವಹಾರವನ್ನು ಮನದ ಸೋಲುಗೆಲುವುಗಳನ್ನು ಅದರ ವಿಕಾರ ವಿನಾಶ ದಾರಿಯನ್ನು ಕುರಿತು ಸಾಮಾನ್ಯ ಮನುಷ್ಯರಂತೆ ಅನುಭವಿಸಿ ಬರೆದವರಲ್ಲಿ ಬಸವಣ್ಣನ ವಚನಗಳು ಅತಿ ಮಹತ್ವದ ಸ್ಥಾನ ಪಡೆಯುತ್ತವೆ. ಅಲ್ಲಮ ಅಕ್ಕಮಹಾದೇವಿ ಚೆನ್ನಬಸವ ಸಿದ್ಧರಾಮಾದಿಗಳಲ್ಲಿ ಮನವನ್ನು ಕುರಿತು ಚಿಂತನೆಗಳು ದೊರೆತರು ಈ ಮನದ ಕುಬುದ್ಧಿ ಕುಚಿತ್ತವನ್ನು ಕುರಿತು ಲಿಂಗಮ್ಮನಂತಹ ವಚನಕಾರ್ತಿಯು ವಿಸ್ತರಿಸುತ್ತಾಳೆ.

ಈ ಮನ ಸಾಧಕನನ್ನು ಸಾವಿರ ಮುಖಗಳಲ್ಲಿ ಅಡ್ಡಿ ಪಡಿಸಲು ಮುಂದಾಗುತ್ತವೆ. ಇದು ಎಷ್ಟು ಭಯಂಕರವೋ ಅಷ್ಟೇ ವಿಚಿತ್ರ. ಇದರ ಗುಣ ಸದಾ ಕ್ರಿಯಾಶೀಲತೆ. ಅಧೀನರಾದವರನ್ನು ಹುರಿದು ತಿನ್ನುತ್ತದೆ, ಆಗದವರನ್ನು ಸೋಲಿಸುತ್ತದೆ, ಗೆದ್ದವರಿಗೆ ಶರಣಾಗುತ್ತದೆ. ಮನಸ್ಸಿಗೆ ಒಳಪಟ್ಟವನು ದೆವ್ವನಾಗುವನು, ಮನಸ್ಸನ್ನು ಗೆದ್ದವನು ದೇವರೆನಿಸಿಕೊಳ್ಳುತ್ತಾನೆ. ಮನದ ಅರಿವೇ ಮಹಾದೇವ.

ಈ ಮನಸ್ಸನ್ನು ಬಸವಣ್ಣ ಕಳ್ಳಿ ಎಂದು ಕರೆದಿದ್ದಾನೆ. ಮಾನಸಗಳ್ಳಿ ಪ್ರತೀಕದ ಮೂಲಕ ಮನಸ್ಸಿನ ಚಾಂಚಲ್ಯವನ್ನು ವಿಲಾಸವಿಭ್ರಮೆಯನ್ನು ಜಡತ್ವ ಕ್ರಿಯೆಗಳನ್ನು ವಿವರಿಸುತ್ತಾ ಮನದ ಮೂಲಕವೇ ಅಂತರಂಗ ಬಹಿರಂಗಗಳನ್ನು ತೆರೆದಿಟ್ಟಂತೆ ವಿವರಿಸಿದ್ದಾನೆ. ಒಳಗೆ ಆಸೆ ಆಮಿಶ ವಿಷಯಾತುರತೆ ಕುಟಿಲ ಕುಹಕ ಕ್ರೋಧ ಮಿಥ್ಯಾ ನಟನೆ ನಡೆದು ನಾಲಿಗೆಯ ಮೇಲೆ ಒಂದು ಮಾತು ಒಳಮನಸ್ಸು ಚಿಂತಿಸುವುದು ಮತ್ತೊಂದು. ಪಂಚೇಂದ್ರಿಯಗಳನ್ನು ಇದು ತನ್ನ ಕೈಯಲ್ಲಿಟ್ಟುಕೊಂಡು ತನಗಿಷ್ಟಬಂದಂತೆ ಆಡಿಸುವುದು ಮನದ ಹುಟ್ಟುಗುಣ. ತಾನೊಂದು ಬಗೆದರೆ ಮತ್ತೊಂದು ದಿಕ್ಕಿಗೆ ತನ್ನನ್ನು ಎಳೆಯುವುದು. ಹೆಣ್ಣಿನ ಸಂಕೇತದಲ್ಲಿ ಜಾರೆ ಹೆಣ್ಣನ್ನು ಮುಂದಿಟ್ಟುಕೊಂಡು ಬಸವಣ್ಣ ಅವಳ ವಚನವೆಲ್ಲ ಹೃದಯದಲ್ಲಿ ನಂಜು ತುಂಬಿರುವುದು ಎನ್ನುತ್ತಾನೆ. ಕಂಗಳಲ್ಲಿ ಒಬ್ಬನನ್ನು ಕರೆದು ಮನದಲ್ಲಿ ಇನ್ನೊಬ್ಬನನ್ನು ನೆನೆದು ತನುವಿನಿಂದ ಮಾತ್ರ ಹಾದರಗಿತ್ತಿಯಲ್ಲ. ಮಾನಸಿಕವಾಗಿಯೂ ವೈಚಾರಿಕವಾಗಿಯೂ ಹಾದರಗಿತ್ತಿ ಎಂದು ಈ ಮಾನಸಗಳ್ಳಿಯನ್ನು ವಿವರಿಸುತ್ತಾನೆ. ಇವಳ ವಾಸ ಎಲ್ಲರ ಅಂತರಂಗದಲ್ಲಿದ್ದರೂ ಆಕೆಯನ್ನು ಉದ್ಘಾಟಿಸಿ ಬದುಕುವುದು ಸಾಗದು. ಭಕ್ತನನ್ನು ಭವಿ ಮಾಡುವುದು ಮನದ ಛಲ. ಮನಸ್ಸನ್ನು ಅತ್ತಿಯ ಹಣ್ಣಿಗೆ ಹೋಲಿಸಿರುವುದು ಹೊರನೋಟಕ್ಕೆ ಚೆಲುವಾಗಿ ಕಂಡರು ಒಳಗೆ ಸಾವಿರ ಹುಳುಗಳ ಹೇಸಿಕೆ ವಾಕರಿಸುವಂತೆ ಈ ಚಿತ್ತವೃತ್ತಿ ದುಷ್ಟಗುಣಗಳ ಆಗರವಾಗಿದೆ. ಇದೊಂದು ಹಾಳುಮನೆ. ಹುಲ್ಲು ಬೆಳೆದು ರಜತುಂಬಿ ಕಸದಿಂದ ಹಾಳಾದ ಮನೆಯೊಳಗೆ ಮನೆಯೊಡೆಯ ಇರಲು ಹೇಗೆ ಸಾಧ್ಯ. ಹಾಗೆಯೇ ತನುವಿನೊಳಗೆ ಹುಸಿ ದುಷ್ಟ ಬುದ್ಧಿಗಳು ವಿಷಯ ತುಂಬಿದ್ದಲ್ಲಿ ಇಂತಹ ಮನದೊಳಗೆ

ಮನೆಯೊಡೆಯನಾಗಿ ಕೂಡಲಸಂಗ ಇರಲಾರನು. ಮನದ ಗುಣ ಎಷ್ಟು ಕೊಳಕು ಎಂದರೆ ಸಗಣಿಯ ಬೆನಕನನ್ನು ಮಾಡಿ ಸಂಪಿಗೆ ಹೂಗಳಿಂದ ಅಲಂಕರಿಸಿ ಪೂಜಿಸಿದರೂ ತೊಳೆದಾಗಲೆಲ್ಲ ತನ್ನ ಗಂಜಳ ಬಿಡುವುದೇ. ಕೆಸರಿನ ಗುಣವೇ ತೋರುತ್ತದೆ ಹೊರತು ಶುದ್ಧತೆಯಲ್ಲ. ಮನಸ್ಸನ್ನು ಕಂಬಳಿಯಲ್ಲಿ ನಾದಿದ ಕಣಕಕ್ಕೆ ಹೋಲಿಸಲಾಗಿದೆ. ದುರ್ಗುಣ ತಾಪತ್ರಯಗಳು ಮಲತ್ರಯಗಳು ಅಹಂಕಾರ ಮಮಕಾರಾದಿಗಳು ವಿಷಯಾದಿ ಸಾವಿರ ದೃಷ್ಟ ಚಿಂತನೆಯ ಸಾವಿರ ಎಳೆಗಳು ಬೆರೆತುಹೋಗಿ ಕಣಕವಷ್ಟೇ ಶುದ್ದವಿದ್ದರೂ ಕಂಬಳಿಯೊಳಗೆ ನಾದಿದಾಗ ಅದರಲ್ಲಿ ಸಾವಿರ ಕೂದಲೆಳೆಗಳು ಸೇರುವಂತೆ ಈ ಮನಸ್ಸಿದೆ.

ವಚನ ಸಾಹಿತ್ಯದಲ್ಲಿ ಮಾಯೆಯ ಪರಿಕಲ್ಪನೆಯು ಆಧ್ಯಾತ್ಮಿಕ ಜ್ಞಾನದ ಅನ್ವೇಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಚನಕಾರರು ಮಾಯೆಯ ಮೋಹವನ್ನು ತ್ಯಜಿಸಿ, ಆತ್ಮ ಸಾಕ್ಷಾತ್ಕಾರದ ಕಡೆಗೆ ಗಮನ ಹರಿಸುವಂತೆ ಕರೆ ನೀಡುತ್ತಾರೆ.

## ಪರಾಮರ್ಶನ ಗ್ರಂಥಗಳು

1. ವಚನ ಸಂಶೋಧನೆ : ವೀರಣ್ಣ ರಾಜೂರ, 2004.

2. ವಚನಗಳಲ್ಲಿ ಮಾಯೆ, ಸಂಸಾರ : ಡಾ. ಶೈಲಜ ಉಡಚಣ

3. ವಚನ ಸಾಹಿತ್ಯ : ಎಂ. ಚಿದಾನಂದಮೂರ್ತಿ (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ), 2020.

4. ಬಸವಣ್ಣನವರ ವಚನಗಳು : (ಸಂ.) ಡಾ. ಎಂ.ಎಂ. ಕಲಬುರ್ಗಿ ; ಕರ್ನಾಟಕ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001.